ದಿನಾಂಕಃ 09.02.2026

ಅಸಲುದಾವಃ 79/2021

ಪಿ.ಡಬ್ಲ್ಯೂ: 2

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ

ನಾನು 4 ನೇ ತರಗತಿಯವರೆಗೆ ಓದಿರುತ್ತೇನೆ. ನಮ್ಮ ತಂದೆಗೆ ನಾವು ಆರು ಜನ ಮಕ್ಕಳು. ಅವರಲ್ಲಿ ಇಬ್ಬರು ಹೆಣ್ಣು ಮಕ್ಕಳು ಮತ್ತು ನಾಲ್ಕು ಜನ ಗಂಡು ಮಕ್ಕಳು. ನಮ್ಮ ತಂದೆ 8-9 ನೇ ತರಗತಿಯವರೆಗೆ ಓದಿರಬಹುದು. ನಿಮ್ಮ ತಂದೆ ಡಿಗ್ರಿ ಮಾಡಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಅವರಿಗೆ ಸೇರ ಬೇಕಿದ್ದ ಎಲ್ಲಾ ಸ್ವತ್ತುಗಳ ಖಾತೆ ವೈಗೈರೆ ಎಲ್ಲವನ್ನೂ ಅವರ ಹೆಸರಿಗೆ ಮಾಡಿಸಿಕೊಂಡಿದ್ದರಲ್ಲವಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಮ್ಮ ತಂದೆ ಅವರ ಹೆಸರಿಗೆ ಖಾತೆ ಇದ್ದ ಎಲ್ಲಾ ಸ್ವತ್ತುಗಳ ಕಂದಾಯ ವೈಗೈರೆ ಎಲ್ಲವನ್ನೂ ಅವರೇ ಕಟ್ಟುತ್ತಿದ್ದರು ಎಂದರೆ ಸರಿ. ನಮ್ಮ ತಂದೆ 1976 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ಅವರ ಹೆಸರಿನಲ್ಲಿ ಇದ್ದ ಎಲ್ಲಾ ಆಸ್ತಿಗಳನ್ನು 1977 ರಲ್ಲಿ ನನ್ನ ತಾಯಿಯ ಹೆಸರಿಗೆ ಪೌತಿ ಖಾತೆ ಮಾಡಿಸಿಕೊಂಡಿರುತ್ತಾರೆ. ನಮ್ಮ ತಂದೆಗೆ ವ್ಯಾವಹಾರಿಕ ಜ್ಞಾನ ಚೆನ್ನಾಗಿತ್ತು ಎಂದರೆ ಸರಿ. ನಮ್ಮ ತಂದೆ ರಾಜಕೀಯ ಪಕ್ಷದಲ್ಲೂ ಇದ್ದರು ಎಂದರೆ ಸರಿ. ಅವರು ಎಸ್.ಎಂ.ಕೃಷ್ಣ ಅವರಿಗೆ ಆತ್ಮೀಯರು ಎಂದರೆ ಸರಿ. 1 ನೇ ಪ್ರತಿವಾದಿ ಸಿದ್ದೇಗೌಡರ ತಂದೆ ಬೋರೇಗೌಡರು ಅವಿದ್ಯಾವಂತರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅದೇ ರೀತಿ ಆ ಬೋರೇಗೌಡರ ಮಗ ಸಿದ್ದೇಗೌಡರ ಮಗನೂ ಸಹ ಅವಿದ್ಯಾವಂತರು ಎಂದರೆ ಸರಿ.

2. ಈ ದಾವೆಯನ್ನು ಸರ್ವೆ ನಂ.279 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಸಾಕ್ಷಿ ಸ್ವತಃ ಹೇಳುತ್ತಾರೆ ನಾವು ಕೊಟ್ಟಿರುವ ಜಮೀನು. ಜಮೀನನ್ನು ನೀವು ಕೊಟ್ಟಿದ್ದೀರಾ, ನಿಮ್ಮ ತಂದೆ ಕೊಟ್ಟಿದ್ದಾರಾ ಎಂದರೆ ಸಾಕ್ಷಿ ನಮ್ಮ ತಂದೆ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತು ನಿಮ್ಮ ತಂದೆಯ ಹೆಸರಿಗೆ ಯಾವುದಾದಲು ಕಾಲಕ್ಕೆ ಖಾತೆಯಾಗಿತ್ತಾ ಎಂದರೆ ಸಾಕ್ಷಿ ಆಗಿತ್ತು ಎಂದು ಉತ್ತರಿಸುತ್ತಾರೆ. ತಂದೆಯ ಹೆಸರಿಗೆ ದಾವ ಸ್ವತ್ತು ಯಾವ ಇಸವಿಯಲ್ಲಿ ಖಾತೆಯಾಯಿತು ಎಂದರೆ ಸಾಕ್ಷಿ 1965-66 ರಲ್ಲಿ ಆಗಿರಬಹುದು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಹೆಸರಿನಲ್ಲಿ ಇದ್ದ ಖಾತೆಯನ್ನು

ನೀವು ಯಾವಾಗ ನೋಡಿದ್ದೀರಿ ಎಂದರೆ ಸಾಕ್ಷಿ 1982–83 ರಲ್ಲಿ ನೋಡಿರುತ್ತೇನೆ ಎಂದು ಉತ್ತರಿಸುತ್ತಾರೆ. ದಾವ ಸರ್ವೆ ನಂ. ಬಾಬ್ತು ನಮ್ಮ ತಂದೆ ಕಂದಾಯ ವಗೈರೆ ಮಾಡಿದ್ದಾರೆ. ನಮ್ಮ ತಂದೆ 1976 ರಲ್ಲಿ ತೀರಿಕೊಂಡಿದ್ದಾರೆ ಅದಕ್ಕಿಂತ ಹಿಂದೆ ಅವರೇ ಕಂದಾಯ ಕಟ್ಟಿರುತ್ತಾರೆ. ನಿಮ್ಮ ತಂದೆಯ ಹೆಸರಿನಲ್ಲಿ ಇದ್ದ ದಾವ ಸ್ವತ್ತಿನ ಖಾತೆಯನ್ನಾಗಲಿ, ಅವರು ಪಾವತಿಸಿದ ಕಂದಾಯದ ರಶೀದಿಗಳನ್ನಾಗಲಿ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ದಾಖಲೆಗಳನ್ನು ಈ ಕೇಸಿನ ವಾದಿ ಬೋರೇಗೌಡರು ನ್ಯಾಯಾಲಯಕ್ಕೆ ಹಾಜರು ಮಾಡಿದ್ದಾರಾ ಇಲ್ಲವಾ ಎಂದು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

3. ನಮ್ಮ ತಾತನ ಹೆಸರು ಗೆಂಡೇಬೋರೇಗೌಡ ಎಂದರೆ ಸರಿ. ಸದರಿಯವರಿಗೆ 5 ಜನ ಗಂಡು ಮಕ್ಕಳು ಎಂದರೆ ಸರಿ. ಅವರೆಂದರೆ ಮೊದಲನೇಯವರು ಬೋರೇಗೌಡ, ಎರಡನೇಯವರು ಸಿದ್ದೇಗೌಡ, ಮೂರನೇಯವರು ಕರಿಗೌಡ, ನಾಲ್ಕನೇಯವರು ಚೆನ್ನೇಗೌಡ ಮತ್ತು ಐದನೇಯವರು ಬಿ. ಲಿಂಗೇಗೌಡ ಎಂದರೆ ಸರಿ. ಮೊದಲನೇ ಬೋರೆಗೌಡರವರು 1 ನೇ ಪ್ರತಿವಾದಿ ಸಿದ್ದೇಗೌಡರ ತಂದೆ ಎಂದರೆ ಸರಿ. ದಾವ ಸರ್ವೆ ನಂ. ಪೈಕಿ ಬೋರೇಗೌಡರ ತಮ್ಮ ಸಿದ್ದೇಗೌಡರ ಹೆಸರಿಗೆ 1 ಎಕರೆ, ಚೆನ್ನೇಗೌಡರ ಹೆಸರಿಗೆ 1 ಎಕರೆ, ಕರಿಗೌಡರ ಹೆಸರಿಗೆ 1 ಎಕರೆ 14 ಗುಂಟೆ ಖಾತೆಯಾಗಿತ್ತು ಎಂದರೆ ಸರಿ. ಗೆಂಡೇಬೋರೇಗೌಡರ ಮೊದಲನೆಯ ಮಗ ಬೋರೇಗೌಡರವರು ತೀರಿಕೊಂಡಿದು ಸುಮಾರು 25–30 ವರ್ಷಗಳಾಗಿವೆ. ಮೊದಲನೇ ಮಗ ಬೋರೇಗೌಡರ ಹಿಸ್ಸೆ ಜಮೀನು 1 ಎಕರೆ ಅವರ ತಂದೆ ಗೆಂಡೇಬೋರೇಗೌಡರ ಹೆಸರಿನಲ್ಲಿಯೇ ಮುಂದುವರಿಯುತ್ತಿತ್ತು ಎಂದರೆ ಸಾಕ್ಷಿ ಹಿರಿಯ ಮಗ ಬೋರೇಗೌಡರಿಗೆ ಆ ಜಮೀನಿನಲ್ಲಿ ಹಿಸ್ಸೆ ಇರಲಿಲ್ಲ ಉಳಿದ ನಾಲ್ಕು ಜನ ಮಕ್ಕಳಿಗೆ ಮಾತ್ರ ಇತ್ತು ಎಂದು ಉತ್ತರಿಸುತ್ತಾರೆ. ಮೊದಲನೇ ಬೋರೇಗೌಡರವರು ತೀರಿಕೊಂಡಿದ್ದ ಕಾರಣ ಬೋರೇಗೌಡರ ಬಾಬ್ತು ಆಸ್ತಿ ಅವರ ಮಗ 1 ನೇ ಪ್ರತಿವಾದಿ ಸಿದ್ದೇಗೌಡರಿಗೆ ಖಾತೆಯಾಗಿದೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಸಿದ್ದೇಗೌಡರ ಹೆಸರಿಗೆ ಆಗಿರುವ ಖಾತೆಯನ್ನು ನೀವಾಗಲಿ, ನಿಮ್ಮ ತಂದೆಯಾಗಲಿ, ನಿಮ್ಮ ಕುಟುಂಬದವರಾಗಲಿ ಯಾವುದಾದರು ನ್ಯಾಯಾಲಯದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತನ್ನು ಮಾರಾಟ ಮಾಡುವ ಕಾಲಕ್ಕೆ ಮಾಲಿಕತ್ವದ ಹಕ್ಕು ನಿಮ್ಮ ತಂದೆಯವರಿಗೆ ಇತ್ತು

ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದಾದರು ದಾಖಲಾತಿ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಪಾಲು ಪಾರಿಕತ್ ಆಗಿತ್ತು ಎಂದು ಉತ್ತರಿಸುತ್ತಾರೆ. ಯಾರು ಯಾರ ನಡುವೆ ಪಾಲು ಪಾರಿಕತ್ ಆಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಯಾವ ಇಸವಿಯಲ್ಲಿ ಪಾಲು ಪಾರಿಕತ್ ಆಗಿತ್ತು ಎಂದರೆ ಸಾಕ್ಷಿ 1965-66 ರಲ್ಲಿ ಆಗಿರಬಹುದು ಎಂದು ಉತ್ತರಿಸುತ್ತಾರೆ. ಆ ಪಾಲು ಪಾರಿಕತ್ ಪ್ರಕಾರ ನಿಮ್ಮ ತಂದೆಯ ಹೆಸರಿಗೆ ಎಂ.ಆರ್. , ಖಾತೆ, ಆರ್.ಟಿ.ಸಿ ಆಗಿತ್ತಾ ಎಂದರೆ ಸಾಕ್ಷಿ ಆಗಿತ್ತು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಹೆಸರಿಗೆ ಆದ ಎಂ.ಆರ್. , ಖಾತೆ, ಆರ್.ಟಿ.ಸಿ ಯನ್ನು ನೀವಾಗಲಿ, ವಾದಿ ಬೋರೇಗೌಡರಾಗಲಿ ನ್ಯಾಯಾಲಯಕ್ಕೆ ಹಾಜರು ಪಾಡಿಸಬಹುದಾ ಎಂದರೆ ಸಾಕ್ಷಿ ಹಾಜರು ಪಡಿಸಬಹುದು ಎಂದು ಉತ್ತರಿಸುತ್ತಾರೆ. ದಾವ ಸರ್ವೆ ನಂ. ಆಸ್ತಿ ನಮ್ಮ ತಂದೆಯ ಹೆಸರಿಗೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ಹೈಟೆನ್ಷನ್ ವಿದ್ಯುತ್ ತಂತಿ ಹಾದು ಲಹೋಗಿದೆ ಎಂದರೆ ಸಾಕ್ಷಿ ಇತ್ತೀಚೆಗೆ ಹಾದು ಹೋಗಿದೆ ಎಂದು ಉತ್ತರಿಸುತ್ತಾರೆ. ಅದರ ಬಾಬ್ತು ಪರಿಹಾರದ ಹಣವನ್ನು 1 ನೇ ಪ್ರತಿವಾದಿ ಕುಟುಂಬದವರು ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ದಾವ ಸ್ವತ್ತಿನಲ್ಲಿ ಈಗ ತೆಂಗಿನ ಮರ ಮತ್ತು ಕಬ್ಬಿನ ಬೆಳೆ ಇದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಬೆಳೆಯನ್ನು 1 ನೇ ಪ್ರತಿವಾದಿಯ ಕುಟುಂಬದವರು ಬೆಳೆದಿದ್ದಾರೆ ಎಂದರೆ ಸಾಕ್ಷಿ ಅವರು ಬೆಳೆದಿಲ್ಲ, ನಮ್ಮಿಂದ ತೆಗೆದುಕೊಂಡವರು ಬೆಳೆದಿದ್ದಾರೆ ಎಂದು ಉತ್ತರಿಸುತ್ತಾರೆ.

4. 1 ನೇ ಪ್ರತಿವಾದಿ ಸಿದ್ದೇಗೌಡರವರು ನನ್ನ ತಂದೆಯ ಅಣ್ಣನ ಮಗ, ನನಗೆ ದೊಡ್ಡಪ್ಪನ ಮಗ. ಈ ದಾವೆಯಲ್ಲಿ ನೀವು ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕೆ 1 ನೇ ಪ್ರತಿವಾದಿ ಸಿದ್ದೇಗೌಡರವರು ನಿಮ್ಮ ದೊಡ್ಡಪ್ಪನ ಮಗ ಎಂದು ನಿಮಗೆ ಗೊತ್ತಿತ್ತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಆ ವಿಚಾರವನ್ನು ಬರೆಸಲು ತೊಂದರೆ ಏನೂ ಇರಲಿಲ್ಲ. ದುರುದ್ದೇಶದಿಂದ ನಿಮ್ಮ ಹಾಗು 1 ನೇ ಪ್ರತಿವಾದಿಯ ಸಂಬಂಧವನ್ನು ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕೆ ಮುಚ್ಚಿಟ್ಟಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಹಾಗು 1 ನೇ ಪ್ರತಿವಾದಿಯ ಕುಟುಂಬಕ್ಕೂ ಸುಮಾರು 50-60 ವರ್ಷಗಳಿಂದ ಮಾತುಕತೆ ಇಲ್ಲ ಎಂದರೆ ಸಾಕ್ಷಿ ಚೆನ್ನಾಗಿಯೇ ಇದ್ದೇವೆ ಎಂದು ಉತ್ತರಿಸುತ್ತಾರೆ. ಆ ದ್ವೇಷದ ಮೇರೆಗೆ ನೀವು ವಾದಿಯ ಪರವಾಗಿ ಬಂದು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು

ಉತ್ತರಿಸುತ್ತಾರೆ. ದಾವ ಸ್ವತ್ತನ್ನು ಮಾರಾಟ ಮಾಡಲು ನಿಮ್ಮ ತಂದೆಗೆ ಯಾವುದೇ ಮಾಲಿಕತ್ವವಾಗಲಿ, ಅಧಿಕಾರವಾಗಲಿ ಇರಲಿಲ್ಲ ಎಂದರೆ ಸಾಕ್ಷಿ ಅವರ ಹೆಸರಿಗೆ ಇತ್ತು ಮಾರಿದ್ದಾರೆ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಸೇರಿದ ಸ್ವತ್ತನ್ನು ಲಪಟಾಯಿಸುವ ದುರುದ್ದೇಶದಿಂದ ನಿಮ್ಮ ತಂದೆ ಮತ್ತು ವಾದಿಯ ತಂದೆ ಸೇರಿ ಸೃಷ್ಟಿಸಿಕೊಂಡಿರುವ ಸುಳ್ಳು ದಾಖಲಾತಿಗೆ ಪೂರಕವಾಗಿ ನೀವು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತಿನಲ್ಲಿ ಯಾವತ್ತೂ ಕೂಡ ವಾದಿಯಾಗಲಿ ಅವರ ತಂದೆಯಾಗಲಿ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಇದ್ದೆವು ಎಂದು ಉತ್ತರಿಸುತ್ತಾರೆ. ದಾವ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಸಿದ್ದೇಗೌಡ ಅವರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ವಿಚಾರ ನಿಮಗೆ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.